ಆ) 98-99ನೇ ಸಾಲಿನಲ್ಲಿ ಸೇತುವೆ ಕೆಲಸ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇ) 98-99ನೇ ಸಾಲಿನಲ್ಲಿ ಸೇತುವೆ ಕೆಲಸ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ

284 (311) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಲಪ್ರಭಾ ಎಡದಂಡೆ ಕಾಲುವೆ ವ್ಯಾಪ್ತಿಯಲ್ಲಿ 37ನೇ ಡಿಸ್ಟ್ರಿಬ್ಯೂಟ್ ಯಾವಾಗ ಪೂರ್ತಿಗೊಳಿಸಲಾಗಿದೆ (ಅಂದಾಜು ವೆಚ್ಚ ಹಾಗೂ ನೀರಾವರಿ ಪ್ರದೇಶದ ವಿವರ ನೀಡುವುದು)

ಆ) ಅಂದಿನಿಂದ ಇಂದಿನವರೆಗೆ ಎಷ್ಟು ಜಮೀನಿಗೆ ನೀರನ್ನು ಒದಗಿಸಲಾಗಿದೆ.

ಇ) ಹಂಚಿಕೆಯ ವ್ಯಾಪ್ತಿಯಲ್ಲಿ ಬರುವ ರೈತರು ಬಹಳ ವರ್ಷಗಳಿಂದ ಸರ್ಕಾರದ ಗಮನ ಸೆಳೆದರು ಯಾವುದೇ ಪ್ರಯೋಜನವಾಗಿಲ್ಲದಿರುವುದಕ್ಕೆ ಕಾರಣವೇನು.

ಈ) ಹಾಗಿದ್ದಲ್ಲಿ ಈ ವರ್ಷದಲ್ಲಿಯೇ 37 ನೇ ಡಿಸ್ಟ್ರಿ ಬ್ಯೂಟರಿಯನ್ನು ಸರಿಪಡಿಸಿ ನೀರನ್ನು ಬಿಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) 37ನೇ ಡಿಸ್ಟ್ರಿ ಬ್ಯೂಟರಿಯು 1981-82ರಲ್ಲಿ ಪ್ರಾರಂಭವಾಗಿ 1984-85ರಲ್ಲಿ ಪೂರ್ಣಗೊಂಡಿರುತ್ತದೆ. ಮತ್ತು ಈ ಕಾಲುವೆಗೆ ರೂ. 367.62 ಲಕ್ಷ ಖರ್ಚಾಗಿರುತ್ತದೆ. ಸದರಿ ಡಿಸ್ಟ್ರಿಬ್ಯೂಟರಿಯ ಅಧಿಸೂಚಿತ ಕ್ಷೇತ್ರ 3636 ಹೆ. ಇರುತ್ತದೆ

ಆ) ಇಂದಿನವರೆಗೆ 2376 ಹೆ. ಪ್ರದೇಶಕ್ಕೆ ಸರಿಯಾಗಿ ನೀರು ಸರಬರಾಜು ಆಗುತ್ತಿದ್ದು 1320 ಹೆ. ಪ್ರದೇಶಕ್ಕೆ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ.

ಇ) ತಾಂತ್ರಿಕ ಸಮಸ್ಯೆಗಳಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ಈ) 98-99 ನೇ ಸಾಲಿನಿಲ್ಲಿ ಈ ಸಮಸ್ಯೆಗಳನ್ನು ನಿವಾರಿಸಿ ನೀರು ಪೂರೈಕೆಯನ್ನು ಉತ್ತಮಪಡಿಸಲು ಯೋಜಿಸಲಾಗಿದೆ.

ಬಾದಾಮಿ ತಾಲ್ಲೂಕಿನಲ್ಲಿ ಕುಳಗೇರಿ ಕ್ರಾಸ್‌ನಲ್ಲಿ 33 ಕೆವಿ ಸಬ್ - ಸ್ಟೇಷನ್ ಮಂಜೂರಾತಿ

285 (312) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಇಂಧನ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಾದಾಮಿ ತಾಲ್ಲೂಕಿನಲ್ಲಿ ಕುಳಗೇರಿ ಕ್ರಾಸ್‌ನಲ್ಲಿ 33 ಕೆವಿ ಸಬ್ - ಸ್ಟೇಷನ್ ಯಾವಾಗ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

(ಅಂದಾಜು ವೆಚ್ಚದ ವಿವರ ನೀಡುವುದು)

ಅ) ಮಂಜೂರಾತಿ ನೀಡಿದಾಗ್ಯೂ ಕಾಮಗಾರಿ ವಿಳಂಬಕ್ಕೆ ಕಾರಣವೇನು,

ಇ) ಹಾಗಿದ್ದಲ್ಲಿ, ಶೀಘ್ರವಾಗಿ ಕಾಮಗಾರಿ ನಿರ್ದಿಷ್ಟವಾಗಿ ಕೈಗೆತ್ತಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆಯೇ, ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಬಾದಾಮಿ ತಾಲ್ಲೂಕು ಕುಳಗೇರಿ ಕ್ರಾಸ್‌ನಲ್ಲಿ ಒಂದು 33:11 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣದ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಡಿಸೆಂಬರ್ 95 ರಲ್ಲಿ ಅನುಮೋದನೆ ನೀಡಿದೆ. ಆಡಳಿತಾತ್ಮಕ ಮಂಜೂರಾತಿಯನ್ನು ಇದುವರೆಗೆ ನೀಡಿರುವುದಿಲ್ಲ. ಈ ಕಾರ್ಯಕ್ಕೆ ತಗಲುವ ವೆಚ್ಚ ಸುಮಾರು 101.5 ಲಕ್ಷ ರೂ.ಗಳು

ಆ) ಆಡಳಿತಾತ್ಮಕ ಮಂಜೂರಾತಿಯನ್ನು ಇದುವರೆಗೆ ನೀಡಿಲ್ಲವಾದ್ದರಿಂದ ಕಾಮಗಾರಿಯನ್ನು ಪ್ರಾರಂಭಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಕಾರ್ಯವನ್ನು 9ನೇ ಯೋಜನೆಯ ಕಾರ್ಯ ಕ್ರಮಗಳಡಿಯಲ್ಲಿ ಸೇರಿಸಲಾಗಿದೆ. 1998-99ರ ಆಯವ್ಯಯದಲ್ಲಿ ಈ ಕಾರ್ಯವನ್ನು ಸೇರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದರೆ ಇದು ಮಂಡಳಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಅವಲಂಭಿಸಿದೆ.

ಶಿವಮೊಗ್ಗ ನಗರಕ್ಕೆ ಹೆಚ್ಚುವರಿ ಪೋಲೀಸ್ ಠಾಣೆ

286 (211) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿವಮೊಗ್ಗ ನಗರದ ಪ್ರಾದೇಶಿಕ ಗಾತ್ರ ಮತ್ತು ಜನಸಂಖ್ಯೆ ಹೆಚ್ಚಾಗಿರುವುದರಿಂದ ನಗರದ ರಕ್ಷಣಾ ದೃಷ್ಟಿಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೆಚ್ಚುವರಿ ಪೋಲೀಸ್ ಠಾಣೆ ಯನ್ನು ಪ್ರಾರಂಭಿಸುವ ಕುರಿತು ಕೂಡಲೇ ಸರ್ಕಾರವು ಕ್ರಮ ಕೈಗೊಳ್ಳುವರೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು

ಆ) ಶಿವಮೊಗ್ಗ ನಗರದ ಕೆಲವು ಬಡಾವಣೆಗಳನ್ನು ಸೇರಿಸಿಕೊಂಡು ನಗರದಲ್ಲಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಕ್ರಮಕೈಗೊಳ್ಳಲಾಗುವುದು.

ಸ್ವಾತಂತ್ರ ಹೋರಾಟಗಾರರಿಗೆ ಗೌರವ ಧನ ಹೆಚ್ಚಳ

287 (275) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ